2) ಶ್ರೀ ಕೆ.ಎಂ. ಚಂದ್ರೇಗೌಡ, ಕೆ.ಎ.ಎಸ್.

3) ಶ್ರೀ ಎಸ್.ವೈ. ಹೊಸಮನಿ, ಕೆ.ಎ.ಎಸ್.

4) ಶ್ರೀ ಎನ್.ಕೆ. ಲಕ್ಷ್ಮಣ್, ಕೆ.ಎ.ಎಸ್.

5) ಶ್ರೀ ಎಸ್.ಎನ್. ಪಟ್ಟಣಶೆಟ್ಟಿ, ಕೆ.ಎ.ಎಸ್.

ಈ ಕೆಳಗಿನಂತೆ ಒಂದು ಪ್ರಕರಣದಲ್ಲಿ ಲೋಕಾಯುಕ್ತವು ನ್ಯಾಯಾಲಯಕ್ಕೆ ಬಿ. ವರದಿ ಸಲ್ಲಿಸಿದೆ.

1) ಶ್ರೀ ಎಂ. ವೀರಭದ್ರಯ್ಯ, ಕೆ.ಎ.ಎಸ್.

ಈ ಕೆಳಗಿನಂತೆ ಐದು ಪ್ರಕರಣಗಳಲ್ಲಿ ಲೋಕಾಯುಕ್ತದಲ್ಲಿ ತನಿಖೆಯಲ್ಲಿದೆ;

1) ಶ್ರೀ ಐ.ಆರ್. ಪೆರುಮಾಳ್, ಐ.ಎ.ಎಸ್.

2) ಶ್ರೀ ಪಿ.ಬಿ. ರಾಮಮೂರ್ತಿ, ಐ.ಎ.ಎಸ್.

3) ಶ್ರೀ ಎನ್. ಶಾಂತಪ್ಪ, ಐ.ಎಫ್.ಎಸ್.

4) ಶ್ರೀ ಸಿ. ಸೋಮಶೇಖರ್, ಕೆ.ಎ.ಎಸ್.

5) ಶ್ರೀ ಎ. ಮರೀಗೌಡ, ಕೆ.ಎ.ಎಸ್.

ಶ್ರೀ ಎಸ್.ವೈ. ಹೊಸಮನಿ, ಕೆ.ಎ.ಎಸ್. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಲೋಕಾಯುಕ್ತಕ್ಕೆ ಅನುಮತಿ ನೀಡಲಾಗಿದೆ. ಶ್ರೀ ಕೆ.ಎಂ. ಚಂದ್ರೇಗೌಡ ಹಾಗೂ ಶ್ರೀ ಎಸ್.ಕೆ. ಲಕ್ಷ್ಮಣ್ ಪ್ರಕರಣಗಳಲ್ಲಿ ಆರೋಪವು ಮೇಲ್ನೋಟಕ್ಕೆ ಸಾಬೀತಾಗದ ಕಾರಣ ಕ್ರಿಮಿನಲ್ ಮೊಕದ್ದಮೆ ಹೂಡಲು ಅನುಮತಿಯನ್ನು ನಿರಾಕರಿಸಲಾಗಿದೆ.

ಈ ಕೆಳಕಂಡ ಪ್ರಕರಣಗಳಲ್ಲಿ ಲೋಕಾಯುಕ್ತದ ಶಿಫಾರಸ್ಸು ಸರ್ಕಾರದ ಪರಿಶೀಲನೆಯಲ್ಲಿದೆ:

1) ಶ್ರೀ ಎಸ್.ಎಂ. ರಾಜು, ಐ.ಎ.ಎಸ್.

2) ಶ್ರೀ ಎಸ್.ಎಸ್. ಪುಟ್ಟಣಶೆಟ್ಟಿ, ಕೆ.ಎ.ಎಸ್.

ಯಲಹಂಕ ಉಪನಗರಕ್ಕೆ ಕಛೇರಿ ಸಮಯದಲ್ಲಿ ಮಹಿಳಾ ವಿಶೇಷ ಬಸ್ ಸೌಲಭ್ಯ ಒದಗಿಸುವ ಬಗ್ಗೆ

84 (468) : ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಲಹಂಕ 4ನೇ ಹಂತದಿಂದ ಬೆಳಿಗ್ಗೆ 09-00 ಗಂಟೆಗೆ ಪ್ರಾರಂಭಿಸುವ ಮಹಿಳಾ ವಿಶೇಷ ಬಸ್ಸನ್ನು 5ನೇ ಹಂತದಿಂದ ಪ್ರಾರಂಭಿಸಲು ಅಗತ್ಯವಾಗಿರುವುದರಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ;

ಆ) ಅದೇ ಮಹಿಳಾ ವಿಶೇಷ ಬಸ್ಸನ್ನು ಸಾಯಂಕಾಲ 4ನೇ ಹಂತದಿಂದ 5ನೇ ಹಂತದವರೆಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಕಛೇರಿಯ ಸಮಯದಲ್ಲಿ ಸುಮಾರು 08 ತಿಂಗಳಿನಿಂದ ವಿಧಾನಸೌಧದಿಂದ ಪ್ರಾರಂಭಿಸಿದ್ದ ಜಂಟಿ ವಾಹನ ಸೌಲಭ್ಯವನ್ನು ಸುಮಾರು 20 ದಿನಗಳಿಂದ ಸ್ಥಗಿತಗೊಳಿಸಲು ಕಾರಣಗಳೇನು;

ಈ) ಜಂಟಿ ವಾಹನವು ಪ್ರಾರಂಭದಲ್ಲಿ ಭರ್ತಿಯಾಗಿ ಪ್ರಯಾಣಿಕರು ನಿಂತು ಪ್ರಯಾಣಿಸುವುದರಿಂದ ಜಂಟಿ ವಾಹನ ಅಥವಾ ಎರಡು ಬಸ್ಸುಗಳ ಸೌಲಭ್ಯವನ್ನು ಪುನ: ಪ್ರಾರಂಭಿಸಿ

ಇದರ ಸೇವೆಯನ್ನು 4ನೇ ಹಂತದ ಬದಲು 5ನೇ ಹಂತದವರೆಗೆ ವಿಸ್ತರಿಸಿ ಸಂಚರಿಸಲು ಕ್ರಮ ವಹಿಸಲಾಗುವುದೇ:

ಉ) ಯಲಹಂಕ ಉಪನಗರದ ಇದೇ ಬಡಾವಣೆಯಿಂದ ಮೆಟ್ರೊ ಬಸ್ ಸೌಲಭ್ಯ ವಿಲ್ಲದ ಕಾರಣ ಬಿ.ಟಿ.ಎಂ. ಬಡಾವಣೆಯ ವರೆಗೆ ಮೆಟ್ರೋ ಸೇವೆಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದೇ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು.

ಇ) ಜಂಟಿ ವಾಹನವನ್ನು ದುರಸ್ಥಿಗೊಳಿಸಲು ನಿಲ್ಲಿಸಿದ್ದು, ಈ ಬಸ್ಸಿನ ಬದಲಾಗಿ ಸಾಮಾನ್ಯ ಬಸ್ಸನ್ನು ಆಚರಣೆಗೊಳಿಸಲಾಗುತ್ತಿದ್ದು, ಈಗ ಒಂದು ಜಂಟಿ ವಾಹನವನ್ನು ಕಾರ್ಯಾಚರಣೆಗೊಳಿಸಲು ಕ್ರಮ ಜರುಗಿಸಲಾಗಿದೆ.

ಈ) ಜಂಟಿ ವಾಹನವನ್ನು ಆಚರಣೆಗೊಳಿಸುತ್ತಿರುವುದರಿಂದ, ಎರಡು ಬಸ್ಸುಗಳ ಅವಶ್ಯಕತೆ ಇರುವುದಿಲ್ಲ ಹಾಗೂ 4ನೇ ಹಂತದ ಬದಲು 5ನೇ ಹಂತಕ್ಕೆ ವಿಸ್ತರಿಸಿ ಆಚರಣೆಗೊಳಿಸಲಾಗುವುದು.

ಉ) ಸಧ್ಯಕ್ಕೆ ಪರಿಶೀಲನೆಯಲ್ಲಿಲ್ಲ.

ಯಲಹಂಕ ನಗರ ಸಭಾ ವ್ಯಾಪ್ತಿಯ ನಾಲ್ಕನೇ ಹಂತದ ರಸ್ತೆಗಳನ್ನು ದುರಸ್ತಿ ಮಾಡುವ ಬಗ್ಗೆ

85 (469) : ಶ್ರೀ ಸುಬ್ಬಾರೆಡ್ಡಿ. ಕೆ.ಎಸ್. (ಬಸವನಗುಡಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಲಹಂಕ ನಗರ ಸಭೆಯ ವ್ಯಾಪ್ತಿಗೆ ಬರುವ ನಾಲ್ಕನೇ ಹಂತದ ಎಲ್ಲಾ ರಸ್ತೆಗಳು ದುಸ್ಥಿತಿಯಲ್ಲಿದ್ದು, ಬೆಂಗಳೂರು ಮಹಾನಗರ ಪಾಲಿಕೆಯು ರಸ್ತೆಗಳ ಗುಂಡಿಗಳನ್ನು ಮುಚ್ಚುವ ರೀತಿಯಲ್ಲಿ ರಸ್ತೆಗಳನ್ನು ದುರಸ್ಥಿಗೊಳಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ನಕಲಿ ಛಾಪಾ ಕಾಗದ ಹಗಣ ಕುರಿತು

87 (257) : ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕಲಿ ಸ್ಟಾಂಪ್ ಪೇಪರ್ ಹಗರಣ ಕುರಿತಂತೆ ರಾಜ್ಯದಲ್ಲಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆಯೆ;

ಆ) ಸ್ಥಾಪಿಸಿದ್ದರೆ ಅದು ಎಂದಿನಿಂದ ಅಸ್ತಿತ್ವಕ್ಕೆ ಬಂದಿದೆ;

ಇ) ಈ ನ್ಯಾಯಾಲಯಕ್ಕೆ ನಿಯೋಜಿಸಲಾಗಿರುವ ಸಿಬ್ಬಂದಿಯ ವಿವರಗಳನ್ನು ನೀಡುವುದು; (ಯಾವ್ಯಾವ ಇಲಾಖೆಯಿಂದ ನಿಯೋಜಿಸಲಾಗಿದೆ)

ಈ) ಇದುವರೆವಿಗೂ ವಿಶೇಷ ನ್ಯಾಯಾಲಯದಿಂದ ಆಗಿರುವ ಪ್ರಗತಿಯೇನು?